442

ಮೈಸೂರ ಗೆಜೆಟ್.

ಸಂ. 44.] ಸರ್ಕಾರದಿಂದ ಫಾಯಿಷ್ ಆದ್ದು. [ನ೦. 48.

ಬೆಂಗಳೂರು, ಗುರುವಾರ, ಡಿಸೆಂಬರ್ ತಾ॥ 9, ಸ೯ 1909.

ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬ್ಯೆ ಬೇರೆ ಬೇರೆಯಾಗಿ ಪುಟಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

	ಪುಟಸಂಖ್ಯೆ.
ಸಪ್ಲಿಮೆಂಟ್—ಮೈಸೂರು ನ್ಯಾಯವಿಧಾಯಕ ಸಭೆಯ ನಡವಳಿಕೆಗಳ ಸಾರಾಂಶ ...	1—15
Iನೆ ಭಾಗ—ಮೈಸೂರು ಸೀಮೆಯ ಶ್ರೀಮರ್ ಮಹಾರಾಜಾ ಸರ್ಕಾರದ ಆಯಾಯ ಇಲಾಖಾದವರಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು	442—444
IIನೆ ಭಾಗ—ಫಾರಸ್ಟ್, ರೆವಿನ್ಯೂ ಸರ್ವೆ, ರೆವಿನ್ಯೂ, ಸರ್ಕಾರಿ ಪ್ರಕಟನೆಗಳು ...	884—889
IIIನೆ ಭಾಗ—ಲೆಜಿಸ್ಲೆಟಿವ ರೆಗ್ಯುಲೇಷನುಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು ...	51—53
IVನೆ ಭಾಗ—ಸರ್ಕಾರಿ ಕಾಗದಪತ್ರಗಳು—1909ನೆ ವರ್ಷದ 45ನೆಯ ಶನಿವಾರಕ್ಕೆ ಮುಗಿದ ಒಂದು ವಾರದ ಸೀಸ೯ ರಿಪೋರ್ಟು ಯಾ ಕಾಲಗತಿಯನ್ನು ತೋರಿಸುವ ವರದಿ ...	506—513

I ನೆ ಭಾಗ.

ಮೈಸೂರು ಸೀಮೆಯ ಶ್ರೀಮರ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾರೀಖು 23ನೆ ನವಂಬರು 1909.

ನಂ. 4318—ಸ್ಯಾನಿಟೆರಿ 9-09-4, ಸಮಸ್ತ ಜನರ ತಿಳಿವಳಿಕೆಯ ಬ್ಯೆ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :—ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿ ಪ್ಲೇಗು ತಗುಲಿದ ಪ್ರದೇಶಗಳೆಂದು ಆಗಿಂದಾಗ ಪ್ರಕಟಿಸಲ್ಪಟ್ಟಿದ್ದ ಈ ಕೆಳಗೆ ನಮೂದಿಸಿರುವ ಸ್ಥಳಗಳು ಎರಡು ತಿಂಗಳಿಗಿಂತ ಜಾಸ್ತಿಕಾಲದಿಂದಲೂ ಜಾಡ್ಯ ರಹಿತವಾಗಿದ್ದುದರಿಂದ ಅಂಥಾ ಪ್ಲೇಗು ತಗುಲಿದ ಪ್ರದೇಶಗಳ ಪಟ್ಟಿಯಿಂದ ವಜಾ ಮಾಡಲ್ಪಟ್ಟಿವೆ.

ಸ್ಥಳ.				ತಾಲ್ಲೂಕು.
ಅರಳೇಹಳ್ಳಿ	...	...	...	ಪಿಕಾರಿಪುರ.
ಚೆನ್ನಗಿರಿ ಟವ೯	...	...	...	ಚೆನ್ನಗಿರಿ.
ಚಿಕ್ಕಹುಲಿಕೆರೆ	...	...	...	ಡಿಟೋ
ಹೊಳಲೂರು	...	...	...	ಶಿವಮೊಗ್ಗ.
ಗಾಜನೂರು	...	...	...	ಡಿಟೋ
ಅರಬಿಳಚಿ	...	...	...	ಡಿಟೋ
ಅರಕೆರೆ	...	...	...	ಡಿಟೋ
ಗುಡುಮಗಟ್ಟೆ	...	...	...	ಡಿಟೋ
ನಗರ	...	...	...	ನಗರ.
ಕುಂಸಿ ಟವ೯	...	...	...	ಕುಂಸಿ ಸಬ ತಾಲ್ಲೂಕು.

ತಾರೀಖು 24ನೆ ನವಂಬರ್ 1909.

ನಂ. 4407—ಸ್ಯಾನಿಟರಿ 18-09-2, ಹಾಸನ ಡಿಸ್ಟ್ರಿಕ್ಟ್ ಅರಕಲಗೂಡು ತಾಲ್ಲೂಕಿನ ರಾಮನಾಥಪುರಕ್ಕೆ ಬರುವ ಶ್ರೀ ಸುಬ್ರಹ್ಮಣ್ಯಸ್ವಾಮಿಯ ರಥೋತ್ಸವ ಕಾಲದಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶಕೊಟ್ಟರೆ ಅಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ —

1897ನೆಯ ವರ್ಷದ 2ನೆಯ ನಂಬರ್ ಎಪಿಡೆಮಿಕ್ ಡಿಸೀಸಸ್ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರು 1909ನೆಯ ವರ್ಷದ ಡಿಸೆಂಬರು 13ನೆ ತಾರೀಖಿನಿಂದ 22ನೆ ತಾರೀಖಿನ ವರೆಗೆ (ಉಭಯ ದಿನಗಳೂ ಸೇರಿ) ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಅಲ್ಲಿಗೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇನ್ಸ್ಟ್ರಾಕ್ಷನ್ನಿಗೆ ವಿರೋಧವಾಗಿ ಮೇಲ್ಕಂಡ ರಥೋತ್ಸವಕ್ಕೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 4ನೆ ಡಿಸೆಂಬರ್ 1909.

ನಂ. 4771—ಸ್ಯಾನಿಟರಿ 7-09-8, ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :— ಹಾಸನ ಡಿಸ್ಟ್ರಿಕ್ಟ್ನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶವು ಎಪಿಡೆಮಿಕ್ ಡಿಸೀಸಸ್ ರೆಗ್ಯುಲೇಷನ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರವರಿ 10ನೆಯ ತಾರೀಖಿನ ನಂಬರ್ 9383—ಮಿಸಲೇನಿಯಸ್ ಫೈಲ್ 21-96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21-96 ಈ ನಂಬರುಗಳ ಇನ್ಸ್ಟ್ರಾಕ್ಷನ್ನಿಗೆ ಕೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶವೆಂದು ಎಣಿಸಲ್ಪಡುವುದು.

ಸ್ಥಳ
ಅರಕೀಕೆರೆ ... ...

ತಾಲ್ಲೂಕು.
ಅರಕೀಕೆರೆ.

ತಾರೀಖು 8ನೆ ಡಿಸೆಂಬರ್ 1909.

ನಂ. 4769 —ಮ್ಯೂ. 281-09-3, ಸ್ಯ 1894ನೆ ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಜಿಷನ್ ರೆಗ್ಯುಲೇಷನಿನ 6ನೆ ಪ್ರಕರಣವನ್ನನುಸರಿಸಿ, ಇದರಿಂದ ಪ್ರಸಿದ್ಧಪಡಿಸುವುದೇನಂದರೆ :—ಇದರಡಿ ವಿವರಿಸಿರುವ ಜಮೀನು ಸರ್ಕಾರಿ ಕೆಲಸಕ್ಕೆ ಎಂದರೆ, ರಸ್ತೆ ಹಾದುವದಕ್ಕೋಸ್ಕರ ಅವಶ್ಯಕವಾಗಿದೆ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7ನೆ ಪ್ರಕರಣವನ್ನನುಸರಿಸಿ, ಚಿತ್ರದುರ್ಗದ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರಿಗೆ ಸದರಿ ಜಮೀನನ್ನು ಹೊಂದುವುದಕ್ಕೆ ಕ್ರಮ ಜರಗಿಸಲು ಅಧಿಕಾರ ಕೊಟ್ಟಿದೆ.

ಡಿಸ್ಟ್ರಿಕ್ಟ್.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೇದಾರನ ಯಾ ಮಾಲೀಕನ ಹೆಸರು.	ಸರ್ವೆ ನಿಸಿಫೀಲ್ಡ್ ನಂಬರ್.	ಖಾಲಿ ನಿವೇಕನ.	ಈಗ ಸರ್ಕಾರದವರಿಗೆ ಬೀಳಾಗಿರುವ ಜಮೀನಿನ ಸ್ವರೂಪ.	ಚಕ್ಕುಬಂದಿ.			
								ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
					ಖಾ. ನಂ.		ಚದರಗಜ				
ಚಿತ್ರದುರ್ಗ	ದಾವಣಗೆರೆ	ದಾವಣಗೆರೆ ಪೂರ್ವ		ಖಾತೇದಾರ ಮಾಗಾನಹಳ್ಳಿ ಈಶಪ್ಪ ಅನುಭವದಾರ ಹೊಳಲ್ಕೆರೆ ವಿರುಪಾಕ್ಷಪ್ಪ.	733	ಖಾಲಿ ನಿವೇಕನ.	222	ಮೆಸ್ಸರ್ ವೀರಬಸಯ್ಯನ ನಿವೇಕನ.	ಮೆಸ್ಸರ್ ವೀರಬಸಯ್ಯನ ಮನೆ.	ವಿರುಪಣ್ಣನ ಖಾಲಿ ನಿವೇಕನ ಮತ್ತು ವೀರಬಸೈಯ್ಯನ ನಿವೇಕನ.	ಬ್ರಹ್ಮಪ್ಪನವರ ಬೀದಿ.
				ಖಾತೇದಾರ ಮಾಗಾನಹಳ್ಳಿ ಈಶಪ್ಪ ಅನುಭವದಾರ ಹೊಳಲ್ಕೆರೆ ವಿರುಪಣ್ಣ.	726	ಡಿಟೋ	96	ಡಿಟೋ ...	ಸೋಮಣ್ಣ ಮತ್ತು ಕೊಟ್ರಪ್ಪನ ಮನೆ ಹಳ್ಳ.	ಗುಡ್ಡಲಿಂಗಪ್ಪನ ಖಾಲಿ ನಿವೇಕನ.	ವಿರುಪಾಕ್ಷಪ್ಪನ ಖಾಲಿ ನಿವೇಕನ.
				ಸಾಲಗಾವಿ ಗುಡ್ಡಲಿಂಗಪ್ಪ ಖಾತೆದಾರ ಮತ್ತು ಅನುಭವದಾರ.	2614	ಡಿಟೋ	108	ಕಡ್ಡಿಪುಡಿ ಗುರುಶಾಂತಪ್ಪನ ನಿವೇಕನ.	ಮೆಸ್ಸರ್ ವೀರಬಸಯ್ಯನ ಖಾಲಿ ನಿವೇಕನ ಮತ್ತು ಮುದ್ದಬಸಪ್ಪನ ಮನೆ.	ಬೆಳ್ಳುಳ್ಳಿ ಮುರಿಗಪ್ಪನ ಬೀದಿ.	ವಿರುಪಣ್ಣನ ಖಾಲಿ ನಿವೇಕನ.

ತಾರೀಖು 3ನೆ ಡಿಸೆಂಬರ್ 1909.

ನಂ. ಜು. 1517—ಕೋರ್ಟ್ಸ್ 134–09, ಮಿ॥ ಎಸ್. ಎಸ್. ಸೇಟ್ಲೂರ್ರವರು ಚೀಫ್ ಕೋರ್ಟಿನ ಜಡ್ಜಿಯವರ ಸ್ಥಾನದಿಂದ ಈ ಮಾಹೆ 4ನೆ ತಾರೀಖಿನ ದಿವಸ ನಿವೃತ್ತರಾಗಿರುವ ಪ್ರಯುಕ್ತ, ಮಿ॥ ಕೆ. ಎಸ್. ಚಂದ್ರಶೇಖರ ಐಯ್ಯರ್ ಬಿ.ಎ., ಬಿ. ಎಲ್. ರವರು ಮತ್ತೊಂದು ಹುಕುಂ ಕೊಡುವತನಕ ಚೀಫ್ ಕೋರ್ಟಿನ ಜಡ್ಜಿಯವರಾಗಿ ಖದಲಿ ನೋಡತಕ್ಕದ್ದೆಂತಲೂ,

ಮಿ॥ ಸಿ. ಎಸ್. ಬಾಲಸುಂದರಂ ಐಯ್ಯರವರು ಮತ್ತೊಂದು ಹುಕುಂ ಕೊಡುವ ತನಕ ಜನರಲ್ ಮತ್ತು ರೆವಿನ್ಯು ಇಲಾಖೆಯ ಸೆಕ್ರೆಟರಿ ಕೆಲಸ ಖದಲಿ ನೋಡತಕ್ಕದ್ದೆಂತಲೂ ಶ್ರೀಮನ್ಮಹಾರಾಜಾ ಸಾಹೇಬ್ಬರವರು ಹುಕುಂ ದಯಮಾಲಿಸಿರುತ್ತಾರೆ.

ತಾರೀಖು 7ನೆ ಡಿಸೆಂಬರ್ 1909.

ನಂ. 4836—ಲೋ. ಜೋ. 169–09–2, ಕೋಲಾರದ ಚಿನ್ನದ ಗಣಿಗಳ ಮೆಡಿಕಲ್ ಮತ್ತು ಹೆಲ್ತ್ ಆಫಿಸರರಾದ ಮಿ॥ ಜಾಂಷಿದ್ ಮುನಸಿಫ್, ಎಂ. ಆರ್. ಸಿ. ಪಿ., ಎಫ್. ಆರ್. ಸಿ. ಎಸ್., ಡಿ. ಪಿ. ಹೆಚ್.; ಯವರಿಗೆ ಮೈಸೂರು ಸರ್ವಿಸ್ ರೆಗ್ಯುಲೇಷನಿನ 177ನೆ ಪ್ರಕರಣದ ಮೇರಿಗೆ, ಕ್ರಿಸ್‌ಮಸ್ ರಜಾ ಜತೆಗೆ 15 ದಿನಗಳ ಪ್ರಿವಿಲೇಜ್ ರಜಾವನ್ನು ಕೊಟ್ಟಿರುತ್ತೆ. ಇವರು ರಜಾದ ಮೇಲೆ ಗೈರು ಹಾಜರಾಗುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡುವ ತನಕ, ಡಿಸ್ಟ್ರಿಕ್ಟ್ ಮೆಡಿಕಲ್ ಆಫಿಸರರಾದ ಮಿ॥ ಟಿ. ಪಿ. ಕುಪ್ಪಸಾಮಿ ಮೊದಲಿಯಾರ್ರವರು ತಮ್ಮ ಸ್ವಂತ ಕೆಲಸದೊಂದಿಗೆ ಹೆಲ್ತ್ ಆಫಿಸರವರ ಕೆಲಸದ ಚಾರ್ಜಿನಲ್ಲಿ ರತಕ್ಕದ್ದು.

ತಾರೀಖು 8ನೆ ಡಿಸೆಂಬರ್ 1909.

ನಂ. ಜ್ಯು. 1563—ಕೋರ್ಟ್ಸ್ 131–09–2, 1904ನೆ ಇಸವಿಯ ಕ್ರಿಮಿನಲ್ ಪ್ರೊಸೀಜರ್ ಕೋಡಿನ 12ನೆ ಪ್ರಕರಣದ ಮೇರೆಗೆ ಮೈಸೂರು-ಡಿಸ್ಟ್ರಿಕ್ಟ್ ಟ್ರೆಜರಿ ಚಾರ್ಜಿನಲ್ಲಿರುವ ಪ್ರೊಬೇಷನರಿ ಅಸಿಸ್ಟೆಂಟ್ ಕಮಿಷನರ್ ಮಿ॥ ಎಸ್. ವೆಂಕಟರಂಗಂ, ಬಿ.ಎ., ಬಿ.ಎಲ್. ಯವರನ್ನು 3ನೆ ತರಗತಿಯ ಮ್ಯಾಜಿಸ್ಟ್ರೇಟರಾಗಿ ಮೊಕರರು ಮಾಡಿರುತ್ತದೆ.

ತಾರೀಖು 8ನೆ ಡಿಸೆಂಬರ್ 1909.

ನಂ. 4657—ಮ್ಯು. 85–08–20, ಸ್ಯ 1909ನೆ ಜೂನ್ 24ನೆ ತಾರೀಖಿನ ಮೈಸೂರು ಗೆಜೆಟಿನ 1ನೆ ಭಾಗದ 233–234ನೆ ಪುಟಗಳಲ್ಲಿ ಘಾಯಿಷಾಗಿರುವ 19—6—09ನೆ ನಂಬರ್ಕಿನ 12797—ಮ್ಯು. 85–08–14ನೆ ನಂಬರ್ ಸರ್ಕಾರಿ ಇಸ್ತಿಹಾರ್ನಾಮೆಯಲ್ಲಿ ನಮೂದಿಸಿರುವ ಸ್ವತ್ತುಗಳನ್ನು ಸರ್ಕಾರಕ್ಕೆ ತೆಗೆದುಕೊಳ್ಳುವುದಕ್ಕೋಸ್ಕರ ಕ್ರಮ ಜರಿಗಿಸಲು ಸ್ಯ 1894ನೆ ಇಸವಿಯ 7ನೆ ನಂಬರ್ ಲ್ಯಾಂಡ್ ಅಕ್ವಿಜಿಷನ್ ರೆಗ್ಯುಲೇಷನಿನ 7ನೆ ಪ್ರಕರಣದ ಮೇರ್ಗೆ ತಿವಮೊಗ್ಗಾ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರವರಿಗೆ ಅಧಿಕಾರವನ್ನು ಕೊಟ್ಟು ಇರುತ್ತೆ.

ತಾರೀಖು 22ನೆ ಜೂನ್ 1909.

ನಂ. ಜನರಲ್ 7241, ಸರ್ಕಾರಿ ಅಥವಾ ಖಾಸಗಿ ಕೆಲಸದ ಉದ್ದಿಶ್ಯ ದಿವಾನ್ ಸಾಹೇಬರವರ ಭೇಟಿಗಾಗಿ ಬರುವ ಸರ್ಕಾರೀ ಉದ್ಯೋಗಸ್ಥರಿಗೂ ಇತರರಿಗೂ ಸಹ ಸರ್ಕಾರೀ ರಜಾ ದಿವಸಗಳಲ್ಲದ ಸೋಮವಾರ, ಬುಧವಾರ ಮತ್ತು ಶುಕ್ರವಾರದ ದಿವಸಗಳಲ್ಲಿ ಮಧ್ಯಾಹ್ನ 3 ಘಂಟೆ ಲಾಗಾಯಿತು 5 ಘಂಟೆಯ ವರೆಗೆ ದಿವಾನ್‌ಸಾಹೇಬರವರ ಆಫೀಸಿನಲ್ಲಿ ಭೇಟಿ ದೊರೆಯುವುದು. ವಿಶೇಷ ಜರೂರು ಸಂದರ್ಭಗಳಿಗೂ, ಭೇಟಿಯ ಬಗ್ಗೆ ಮೊದಲೇ ಕಾಲ ನಿಷ್ಕರ್ಷೆಯಾಗಿರುವ ಸಂದರ್ಭಗಳಿಗೂ ಸಹ ಈ ನಿಯಮವು ಅನ್ವಯಿಸುವುದಿಲ್ಲ.

ಹುಕುಂ ಬಮೋಜೀಬ್,
ಸಿ. ಎಸ್. ಬಾಲಸುಂದರಂ ಐಯ್ಯರ್,
ಜನರಲ್ ಮತ್ತು ರೆವಿನ್ಯು ಇಲಾಖೆಗಳ ಅಫಿಷಿಯೇಟಿಂಗ್ ಸೆಕ್ರೆಟರಿ.